ರಾಜ್ಯದಲ್ಲಿ ಕಾಣೆಯಾದ ಮಕ್ಕಳ ಸಂಖ್ಯೆ ಹಾಗೂ ಕೈಗೊಂಡಿರುವ ಕ್ರಮ

೧೯. ಶ್ರೀ ಗೋಪಾಲ ಮುಕುಂದ ಕಾನಡೆ,(ಸಿರ್ಸಿ) — ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ರಾಜ್ಯದಲ್ಲಿ ೧೯೮೫-೮೬,೧೯೮೬-೮೭, ೧೯೮೭-೮೮ರಲ್ಲಿ ಕಾಣೆಯಾಗಿರುವ ಮಕ್ಕಳ ಸಂಖ್ಯೆ ಎಷ್ಟು? ಹಾಗೂ ಎಷ್ಟು ಮಕ್ಕಳನ್ನು ಪತ್ತೆ ಹಚ್ಚಲಾಗಿದೆ?

ಆ) ಪತ್ತೆಯಾಗದ ಮಕ್ಕಳ ಬಗ್ಗೆ ಕೈಗೆದುಕೊಂಡ ಕ್ರಮವೇನು ?

ಶ್ರೀ ಆರ್. ಎಲ್. ಜಾಲಪ್ಪ (ಗೃಹ ಮಂತ್ರಿಗಳು).—

ಅ)

ವರ್ಷ	ಕಾಣೆಯಾದ ಮಕ್ಕಳು	ಪತ್ತೆ ಹಚ್ಚಲ್ಪಟ್ಟ ಮಕ್ಕಳು
೧೯೮೫-೮೬	೨೯೩೧	೨೫೭೨
೧೯೮೬-೮೭	೨೭೯೧	೨೫೧೯
೧೯೮೭-೮೮	೨೪೪೩	೨೦೩೩
(ಡಿಸೆಂಬರ್ ೧೯೮೭ರವರೆಗೆ)		

ಆ) ಪತ್ತೆಯಾಗದ ಮಕ್ಕಳನ್ನು ಪತ್ತೆ ಹಚ್ಚಲು ವಿಶೇಷ ಕರ್ತವ್ಯದ ಸಿಬ್ಬಂದಿಯವರನು ನಿಯೋಜಿಸಲಾಗಿದೆ. ರೇಡಿಯೋ, ದೂರದರ್ಶನ, ವೃತ್ತ ಪತ್ರಿಕೆ ಮತ್ತು ಸ್ಥಳೀಯ ವೃತ್ತಪತ್ರಿಕೆಗಳಲ್ಲಿ ಮಕ್ಕಳ ಭಾವಚಿತ್ರ ಮತ್ತು ಜಹರೆಗಳನ್ನು ಪ್ರಕಟಿಸಿ ಪತ್ತೆ ಹಚ್ಚಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

೧೯೮೬-೮೭ರ ಸಾಲಿನಲ್ಲಿ ನಡೆದ ದರೋಡೆಗಳು

೨೨. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ) — ಮಾನ್ಯ ಗೃಹ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ೧೯೮೬-೮೭ರ ಸಾಲಿನಲ್ಲಿ ನಡೆದ ದರೋಡೆಗಳು ಎಷ್ಟು?

ಆ) ಆ ಪೈಕಿ ದರೋಡೆಗಳಲ್ಲಿ ಇದುವರೆವಿಗೂ ಪತ್ತೆ ಹಚ್ಚಲಾಗದ ಸಂಖ್ಯೆ ಎಷ್ಟು?

ಇ) ದರೋಡೆಗಳಲ್ಲಿ ನೊಂದ ಕುಟುಂಬಗಳಿಗೆ ಸರ್ಕಾರದವರು ಸಹಾಯ ಒದಗಿಸಲು ತೆಗೆದು ಕೊಂಡ ಕ್ರಮವೇನು?

ಶ್ರೀ ಆರ್. ಎಲ್. ಜಾಲಪ್ಪ(ಗೃಹ ಮಂತ್ರಿಗಳು).—

ಅ) ೨೦೫ ದರೋಡೆ ಪ್ರಕರಣಗಳು ವರದಿಯಾಗಿದೆ.

ಆ) ಇನ್ನೂ ೧೪೪ ದರೋಡೆ ಪ್ರಕರಣಗಳನ್ನು ಪತ್ತೆ ಹಚ್ಚಬೇಕಾಗಿದೆ.

ಇ) ಡಕಾಯಿತಿ ಪ್ರಕರಣಗಳಲ್ಲಿ ನೊಂದ ಕುಟುಂಬದವರಿಗೆ ಪರಿಹಾರ ಕೊಡಲು ನಿಯಮಗಳಲ್ಲಿ ಅವಕಾಶ ಇಲ್ಲದಿರುವುದರಿಂದ ಕೊಡಲಾಗಿಲ್ಲ.

ಟ್ರಾಕ್ಟರ್ ಹಾಗೂ ಕಾರುಗಳಿಂದ ಒಂದೇ ಸಾರಿ ತೆರಿಗೆ ಪಡೆಯುವ ಬಗ್ಗೆ

೯೬. ಶ್ರೀ ಕೆ. ಬಿ. ಕೋಳಿವಾಡ (ರಾಣೆಬೆನ್ನೂರು),— ಮಾನ್ಯ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಟ್ರಾಕ್ಟರ್ ಹಾಗೂ ಕಾರುಗಾಡಿಗಳಿಗೆ ಒಂದೇ ಬಾರಿತೆರಿಗೆ ಪಡೆಯಬೇಕೆಂದು ಸರ್ಕಾರ ನಿರ್ಣಯಿಸಿದೆಯೇ?